ವಿಧಿಯ ಲೀಲೆಯನ್ನು ಅರ್ಥ ಮಾಡಿಕೊಳ್ಳುವುದು ಬಹಳ ಕಷ್ಟ. ಒಬ್ಬ ದುಷ್ಟ ಮಹಿಳೆ ಕೃಷ್ಣಪ್ಪನ ಜೀವನದಲ್ಲಿ ಪ್ರವೇಶ ಮಾಡಿ, ಈ ದಂಪತಿಗಳನ್ನು ಬೇರ್ಪಡಿಸಿಬಿಟ್ಟಳು! ಹೀಗೆಯೇ ಹಲವು ವರ್ಷಗಳು ಉರುಳಿದವು. ಆದರೆ ಕೃಷ್ಣಪ್ಪ ಹೇಳುತ್ತಿದ್ದ, "ನಾನು ಪ್ರತಿದಿನ ಶ್ರೀರಾಮಕೃಷ್ಣರಿಗೆ ಪ್ರಾರ್ಥನೆ ಮಾಡುತ್ತಿದ್ದಾಗ ಅವಳಿಗಾಗಿ ಯಾಚಿಸುತ್ತಿದ್ದೆ. ಅವರು ಕೂಡ ನನಗೆ ಕೆಲವು ಗುರುತುಗಳನ್ನು ತೋರಿಸಿಕೊಟ್ಟು, ಆಕೆ ತಿರುಗಿ ಬರುತ್ತಾಳೆ ಎಂದು ಸೂಚಿಸಿದ್ದರು." ಆ ಶುಭಸಮಯವೂ ಶೀಘ್ರವೇ ಬಂದಿತು. ರಾಮಕೃಷ್ಣ ಮಠದ ಭಕ್ತನೊಬ್ಬ ಕೃಷ್ಣಪ್ಪನ ಸ್ನೇಹಿತ. ಅವನು ಇಬ್ಬರನ್ನೂ ಭೇಟಿಮಾಡಿದ. ತನ್ನ ಮನೆಗೆ ಇಬ್ಬರನ್ನೂ ಆಹ್ವಾನಿಸಿ, ಇಬ್ಬರೂ ಒಂದಾಗಿ ಬದುಕುವಂತೆ ಪ್ರೀತಿಯಿಂದ ಕೇಳಿಕೊಂಡ. ಅದಲ್ಲದೆ, ಆ ಭಕ್ತನೂ, ಅವನ ಮಡದಿಯೂ ಆ ನತದೃಷ್ಟ ದಂಪತಿಗಳನ್ನು ಚೆನ್ನೈ ಶ್ರೀರಾಮಕೃಷ್ಣ ಮಠಕ್ಕೆ ಕರೆದುಕೊಂಡು ಬಂದರು. ಅಲ್ಲಿನ ಸ್ವಾಮೀಜಿಯವರ ಸಲಹೆಯಂತೆ ಇಬ್ಬರೂ ಶ್ರೀರಾಮಕೃಷ್ಣರಲ್ಲಿ ಹೀಗೆ ಬೇಡಿಕೊಂಡರು: "ನಾವಿಬ್ಬರೂ ಈಗ ಒಂದಾಗಿದ್ದೇವೆ. ದಯವಿಟ್ಟು ಹರಸು ತಂದೆ." ಇಬ್ಬರೂ ಮತ್ತೊಬ್ಬರ ಒಳ್ಳೆಯತನದಲ್ಲಿ ನಂಬಿಕೆಯನ್ನು ಇಟ್ಟುಕೊಂಡಿದ್ದರು. ಇನ್ನೇನು? ಕೆಲವೇ ತಿಂಗಳುಗಳಲ್ಲಿ ಅವರಿಬ್ಬರೂ ಒಂದುಗೂಡಿ ವಾಸಿಸಲಾರಂಭಿಸಿದರು. ಪರಸ್ಪರ ವಿಶ್ವಾಸ ಮತ್ತು ಭಗವತ್ಸ್ವರೂಪರಾದ ಶ್ರೀರಾಮಕೃಷ್ಣರಲ್ಲಿ ಭಕ್ತಿ – ಇವು ಅವರ ಜೀವನವನ್ನು ಮಧುರವಾಗಿಸಿತು. ಇಂದು ಅವರ ಮನೆಗೆ ಅನೇಕ ಸಾಧುಸಂತರು ಭೇಟಿ ನೀಡುತ್ತಾರೆ. ಅವರ ಇಬ್ಬರು ಹೆಣ್ಣುಮಕ್ಕಳು ಕೂಡ ಭಕ್ತಿಯುತರಾಗಿ, ವಿದ್ಯಾವಂತರಾಗಿ ಬಾಳುತ್ತಿದ್ದಾರೆ. ದೇವರ ಮೇಲಿನ ನಂಬಿಕೆ ಮತ್ತು ಭಕ್ತಿಯಿಂದ ಒಂದು ಕುಟುಂಬದ ಸದಸ್ಯರಲ್ಲಿ ಪರಸ್ಪರ ವಿಶ್ವಾಸ ಮೂಡಲು ಸಾಧ್ಯ ಎನ್ನುವುದನ್ನು ಮೇಲಿನ ನಿದರ್ಶನ ಸಾಬೀತು ಪಡಿಸುತ್ತದೆ. ಈ ಗುಣಗಳೇ ಕುಟುಂಬ ಸಾಮರಸ್ಯಕ್ಕೆ ಭದ್ರವಾದ ತಳಹದಿಯನ್ನು ಹಾಕಬಲ್ಲವು.

ಮತ್ತೊಂದು ಘಟನೆ ಹೀಗಿದೆ. ಜಯಾ ಮತ್ತು ನಾರಾಯಣ – ಇವರಿಬ್ಬರೂ ಶ್ರೀರಾಮಕೃಷ್ಣರ ಭಕ್ತರು. ಇಬ್ಬರೂ ಮದುವೆಯಾದರು. ಇಬ್ಬರು ಮಕ್ಕಳು ಹುಟ್ಟಿದವು. ನಾರಾಯಣನ ದುರದೃಷ್ಟವೋ ಎಂಬಂತೆ ಅವನು ಕೆಲಸ ಮಾಡುತ್ತಿದ್ದ ಕಂಪನಿ ನಷ್ಟದಲ್ಲಿ ನಡೆಯುತ್ತಿತ್ತು. ತಿಂಗಳುಗಟ್ಟಲೆ ಅವನಿಗೆ ಸಂಬಳವೇ ಸಿಗುತ್ತಿರಲಿಲ್ಲ. ಸಿಕ್ಕರೂ ಅಲ್ಪ ಸ್ವಲ್ಪ ಮಾತ್ರ ಹಣ ಕೊಡುತ್ತಿದ್ದರು. ನಾರಾಯಣ ಮಾಡಿದ್ದ ಸಾಲದ ಹಣ, ಜಯಾಳ ಆಭರಣ – ಎಲ್ಲವೂ ಕರಗುತ್ತ ಬಂದವು. ಇಷ್ಟಾದರೂ ಇಬ್ಬರಿಗೂ ಶ್ರೀರಾಮಕೃಷ್ಣರಲ್ಲಿ ನಂಬಿಕೆ ಸ್ಥಿರವಾಗಿಯೇ ಇತ್ತು. ಅವರಿಬ್ಬರೂ ಮತ್ತೊಬ್ಬರಿಗಾಗಿ ಎಷ್ಟಾದರೂ ಕಷ್ಟಪಡಲು, ತ್ಯಾಗ ಮಾಡಲು, ಬಡತನ ಜೀವನ ನಡೆಸಲು ಸಿದ್ಧರಾಗಿಯೇ ಇದ್ದರು. ಅದಲ್ಲದೆ ರಾಮಕೃಷ್ಣ ಮಠದಲ್ಲಿ ನಡೆಯುತ್ತಿದ್ದ ಉತ್ಸವಗಳಿಗೆ ತಪ್ಪದೆ ಬರುತ್ತಿದ್ದರು. ಅವರು ಮತ್ತು ಅವರ ಮಕ್ಕಳು ತಪ್ಪದೆ ದಿನನಿತ್ಯವೂ ಜಪ, ಪ್ರಾರ್ಥನೆ, ಧ್ಯಾನಗಳನ್ನು ಮಾಡುತ್ತಿದ್ದರು. ಬಡತನದ ಮಧ್ಯದಲ್ಲಿಯೂ ಒಂದು ಬಗೆಯ ದಿವ್ಯ ತೃಪ್ತಿ ಮತ್ತು ಆನಂದ ಅವರ ಮನಸ್ಸನ್ನು ತುಂಬಿದ್ದಂತೆ ತೋರುತ್ತಿತ್ತು. ಕೊನೆಗೂ ಅವರ ಕಷ್ಟ ಕಳೆಯಿತು. ಮಗಳು ಚೆನ್ನಾಗಿ ಓದಿ, M.Sc. ಯಲ್ಲಿ ತೇರ್ಗಡೆ ಹೊಂದಿ, ಒಳ್ಳೆಯ ಹುದ್ದೆಯನ್ನು ಪಡೆದುಕೊಂಡಳು. ಮಗ ಕಂಪ್ಯೂಟರ್ ಸೈನ್ಸ್ ಪದವಿಯನ್ನು ಪಡೆದು ಇಂಜಿನಿಯರ್ ಆದ. ಈಗ ಆ ಕುಟುಂಬವು ಆರ್ಥಿಕ ಸುಭದ್ರತೆಯಿಂದ ಕೂಡಿದೆ. ಅದಕ್ಕಿಂತ ಹೆಚ್ಚಾಗಿ, ಈ ಕುಟುಂಬದ ಸದಸ್ಯರು ಪರಸ್ಪರ ಪ್ರೀತಿಸುತ್ತಾರೆ; ಮಠಕ್ಕೆ ಬಂದು ಸಾಧುಗಳ ಸೇವೆ ಮಾಡುತ್ತಾರೆ. ಹೀಗೆ ಆ ಸಂಸಾರ 'ಆನಂದಸಾಗರ' ವಾಗಿದೆ. 'ಕಷ್ಟ ಬಂತು; ಕಷ್ಟ ಹೋಯಿತು. ಆದರೆ ಕುಟುಂಬದ ಸಮರಸತೆಯನ್ನು ಹೆಚ್ಚಿಸಿ ಹೋಯಿತು' ಎಂಬ ಮಾತು ಈ ಕುಟುಂಬದ ವಿಷಯದಲ್ಲಿ ಸತ್ಯವಾಗಿದೆ. ಈ ಯಶಸ್ಸಿನ ಹಿಂದಿನ ರಹಸ್ಯ ಏನು ಗೊತ್ತೇ? ದೈವಭಕ್ತಿ, ಪ್ರೀತಿ, ಸಹನೆ, ತ್ಯಾಗ ಮತ್ತು ಸೇವೆಗಳು. ಈ ಆಧ್ಯಾತ್ಮಿಕ ಮೌಲ್ಯಗಳೇ ಕುಟುಂಬದ ಸ್ಥಿರತೆಗೆ ಕಾರಣವಾದುವು.

ವಿಷ್ಣುಸಹಸ್ರನಾಮದ ಫಲಶ್ರುತಿಯಲ್ಲಿ ಈ ಮಾತು ಬರುತ್ತದೆ:

**ಇಮಂ ಸ್ತವಂ ಭಗವತೇ ವಿಷ್ಣೋರ್ವ್ಯಾಸೇನ ಕೀರ್ತಿತಮ್ ।**
**ಪಠೇದ್ಯ ಇಚ್ಛೇತ್ ಪುರುಷಃ ಶ್ರೇಯಃ ಪ್ರಾಪ್ತುಂ ಸುಖಾನಿ ಚ ॥**

"ಯಾರು ಶ್ರೇಯಸ್ಸು (ಪಾರಮಾರ್ಥಿಕ ಸುಖ) ಮತ್ತು ಸುಖ (ಪ್ರಾಪಂಚಿಕ ಸುಖ) ಎರಡನ್ನೂ ಬಯಸುತ್ತಾರೆಯೋ, ಅವರು ವ್ಯಾಸರಿಂದ ರಚಿತವಾದ ಈ ವಿಷ್ಣುಸಹಸ್ರನಾಮವನ್ನು ಅಧ್ಯಯನ ಮಾಡಲಿ."

ಇದಕ್ಕೆ ಕಾರಣವೇನು? ಭಗವಂತನ ನಾಮಸಂಕೀರ್ತನೆಯು ನಮ್ಮ ಮನಸ್ಸಿನ ಭಾವನೆಗಳನ್ನು ಸಂಸ್ಕರಿಸುತ್ತದೆ. ಆ ಮೂಲಕ ನಮ್ಮನ್ನು ನಿಸ್ವಾರ್ಥರನ್ನಾಗಿಯೂ, ಪರಿಶುದ್ಧ ಹೃದಯದವರನ್ನಾಗಿಯೂ ಮಾರ್ಪಡಿಸುತ್ತದೆ. ಅಂತಹ

ಹೃದಯದಲ್ಲಿ ಭಕ್ತಿ, ಪ್ರೀತಿ, ಸೇವೆ, ಜ್ಞಾನ, ಅನುಕಂಪ, ಸಹನೆ, ತೃಪ್ತಿ ಮುಂತಾದ ಉದಾತ್ತಗುಣಗಳ ರೂಪದಲ್ಲಿ ಭಗವಂತನು ಪ್ರಕಟಗೊಳ್ಳುತ್ತಾನೆ. ಇಂತಹ ಜನರು ಯಾವ ಕುಟುಂಬದಲ್ಲಿದ್ದರೂ, ಅಲ್ಲಿ ಪರಸ್ಪರ ಸಹಾಯ, ಪ್ರೀತಿ–ವಿಶ್ವಾಸಗಳು ಬೆಳೆಯುತ್ತವೆ. ಈ ಬಗೆಯ ಕುಟುಂಬಗಳಲ್ಲಿ ಸಾಮರಸ್ಯ ನೆಲೆಸಿರುತ್ತದೆ ಎನ್ನುವುದರಲ್ಲಿ ಸಂದೇಹವೇ ಇಲ್ಲ.

ಇನ್ನು ಸಂಗೀತ ಸಾಮ್ರಾಜ್ಞಿ ಎನಿಸಿದ್ದ ಡಾ. ಎಂ.ಎಸ್. ಸುಬ್ಬುಲಕ್ಷ್ಮಿ ಅವರ ಜೀವನದಲ್ಲಿ ನಡೆದ ಒಂದು ಸ್ವಾರಸ್ಯಕರವಾದ ಘಟನೆಯನ್ನು ನೋಡೋಣ. ಅವರು ಮತ್ತು ಅವರ ಪತಿ ಶ್ರೀ ಸದಾಶಿವಂ ಇಬ್ಬರೂ ಶ್ರೀರಾಮಕೃಷ್ಣರ ಭಕ್ತರು. ಶ್ರೀಮತಿ ಸುಬ್ಬುಲಕ್ಷ್ಮಿ ಅವರು ಹಲವಾರು ಕಡೆ ರಾಮಕೃಷ್ಣ ಮಠ ಮತ್ತಿತರ ಧಾರ್ಮಿಕ ಸಂಘಸಂಸ್ಥೆಗಳಿಗಾಗಿ ಸಂಗೀತ ಕಾರ್ಯಕ್ರಮಗಳನ್ನು ನಡೆಸಿಕೊಟ್ಟು, ಲಕ್ಷಾಂತರ ರೂಪಾಯಿಗಳನ್ನು ದಾನ ಮಾಡಿರುವ ಪುಣ್ಯಶೀಲೆಯಾಗಿದ್ದಾರೆ. ಇಂಥವರ ಬಾಳಿನಲ್ಲಿಯೂ ದುರದೃಷ್ಟ ಕಾಣಿಸಿಕೊಳ್ಳಬೇಕೇ? ಸಮೃದ್ಧ ಸಂಪದ್ಭರಿತ ಕುಟುಂಬವಾಗಿದ್ದ ಈ ದಂಪತಿಗಳಿದ್ದ ಮನೆ, ಅವರ ಸಂಪಾದಿಸಿದ್ದ ಹಣ – ಎಲ್ಲವೂ ಕೈಬಿಟ್ಟುಹೋಗುವ ದಾರುಣ ಪ್ರಸಂಗ ತಲೆದೋರಿತು. ಇಂತಹ ಕಠಿಣ ಪರಿಸ್ಥಿತಿಯಲ್ಲಿ ಅವರಿಬ್ಬರ ನಡುವೆ ಇದ್ದ ಪರಿಶುದ್ಧ ಪ್ರೀತಿ, ವಿಶ್ವಾಸ, ತ್ಯಾಗಭಾವನೆ ಮತ್ತು ದೇವರ ಮೇಲಿನ ನಂಬಿಕೆಗಳೇ ಆ ಕುಟುಂಬವನ್ನು ಕಾಪಾಡಿದವು.

ಯಾರೂ ಸಹಾಯ ಮಾಡದ ಪರಿಸ್ಥಿತಿಯಲ್ಲಿ ಸದಾಶಿವಂ ಚಿಂತಾಜನಕರಾಗಿ ಕುಳಿತಿದ್ದಾಗ, ಸುಬ್ಬುಲಕ್ಷ್ಮಿ ಹೀಗೆ ಹೇಳಿದರಂತೆ: "ನೋಡಿ, ನೀವು ಹೇಗಾದರೂ ಮಾಡಿ ನೂರು ರೂಪಾಯಿಗಳನ್ನು ಸಂಪಾದಿಸಲು ಆಗುವುದಿಲ್ಲವೇ? ನಾನು ಕೂಡ ಹೇಗಾದರೂ ಮಾಡಿ, ನೂರು ರೂಪಾಯಿಗಳನ್ನು ಸಂಪಾದಿಸಿ ತರುತ್ತೇನೆ. ಹೀಗೆ ದೊರಕುವ ಇನ್ನೂರು ರೂಪಾಯಿಗಳಲ್ಲಿ ಹೇಗಾದರೂ ಮಾಡಿ, ಸಂಸಾರದ ಖರ್ಚನ್ನು ಸರಿದೂಗಿಸಿಕೊಳ್ಳೋಣ." ಆಹಾ! ಎಂಥ ಪ್ರೀತಿ, ಸಹಾನುಭೂತಿ ಮತ್ತು ತ್ಯಾಗದ ಭಾವನೆಗಳು ತುಂಬಿದ ಮಾತುಗಳು! ಅದೂ ಶ್ರೀಮತಿ ಸುಬ್ಬುಲಕ್ಷ್ಮಿಯಂಥ ಪತಿವ್ರತೆಯ ಮುಖದಿಂದ! ಕೆಲವು ತಿಂಗಳುಗಳಲ್ಲಿಯೇ ದೇವರು ಅವರ ಕಷ್ಟಗಳನ್ನು ಕಡಮೆ ಮಾಡಿಬಿಟ್ಟ. ಕೆಲವರ್ಷಗಳ ಬಳಿಕ ತ್ಯಾಗಮೂರ್ತಿಯಾದ ಆ ಮಹಾತಾಯಿಗೆ 'ಭಾರತರತ್ನ' ಬಿರುದು ಕೂಡ ಸಂದಿತು. ಆ ಸಂತೋಷದ ಸಂದರ್ಭದಲ್ಲಿ ಅವರ ಮನದಾಳದ ಭಾವನೆಗಳು ಹೇಗಿದ್ದಿರಬಹುದು! ಆಗ ಅವರು ಹೀಗೆ ನುಡಿದರಂತೆ: "ನನಗೆ ಹಿಂದೆ 'ಸಂಗೀತ ಕಲಾನಿಧಿ', 'ಪದ್ಮಭೂಷಣ', 'ಪದ್ಮವಿಭೂಷಣ' ಮುಂತಾದ ಪ್ರಶಸ್ತಿಗಳು ಬಂದಾಗ ಅವುಗಳೆಲ್ಲವನ್ನೂ ಅವರಿಗೇ (ಪತಿಯಾದ ಸದಾಶಿವಂ) ಅರ್ಪಿಸಿ ಹೇಳಿದ್ದೆ, 'ಇದೆಲ್ಲ ನಿಮ್ಮಿಂದಲೇ ಬಂದದ್ದು' ಎಂದು. ಆದರೆ ಈಗ ಅವರೇ ಇಲ್ಲವಲ್ಲ!" (ಅಷ್ಟುಹೊತ್ತಿಗೆ ಶ್ರೀ ಸದಾಶಿವಂ ದೈವಾಧೀನರಾಗಿದ್ದರು.) ಎಂಥ ಕುಟುಂಬ ಸಾಮರಸ್ಯ!

ಮೇಲ್ಕಂಡ ಘಟನೆಗಳು ಏನನ್ನು ಸೂಚಿಸುತ್ತವೆ? ಆಧ್ಯಾತ್ಮಿಕ ಮೌಲ್ಯಗಳಾದ **ಭಗವದ್ಭಕ್ತಿ, ತ್ಯಾಗ, ಸೇವೆ, ಉಪಕಾರ ಮನೋಭಾವ, ಪರಸ್ಪರ ಸಹಯೋಗ, ಪ್ರೀತಿ, ಸಹನೆ**ಗಳಿಂದ ಮಾತ್ರವೇ ಕುಟುಂಬಗಳಲ್ಲಿ ಸಾಮರಸ್ಯ ನೆಲೆಸುತ್ತವೆ ಎನ್ನುವುದನ್ನು, ಅಲ್ಲವೇ?

ಈ ಸಂದರ್ಭದಲ್ಲಿ ಮಹಾಭಾರತದ ಮುನಿಯಾದ ವ್ಯಾಸರ ಮಾತುಗಳು ನೆನಪಿಗೆ ಬರುತ್ತವೆ:

**ಊರ್ಧ್ವ ಬಾಹುರ್ವಿರಾಮ್ಯೇಷ ನ ಕಶ್ಚಿದ್ ಶೃಣೋತಿ ಮೇ ।**
**ಧರ್ಮಾದರ್ಥಶ್ಚ ಕಾಮಶ್ಚ ಸ ಕಿಮರ್ಥಂ ನ ಸೇವ್ಯತೇ ॥**

(*ಮಹಾಭಾರತ*, ಸ್ವರ್ಗಾರೋಹಣ ಪರ್ವ, ೫–೬೨)

"ಎಲೈ ಮಾನವನೇ, ಎರಡೂ ಕೈಗಳನ್ನು ಮೇಲಕ್ಕೆತ್ತಿ ಗಟ್ಟಿಯಾಗಿ ಹೇಳುತ್ತಿದ್ದೇನೆ. ಆದರೂ ನನ್ನ ಮಾತನ್ನು ಯಾರೂ ಕೇಳುತ್ತಿಲ್ಲವಲ್ಲ! ಧರ್ಮದಿಂದಲೇ 'ಅರ್ಥ' (ಧನ) ಮತ್ತು ಕಾಮ (ಬಯಕೆಗಳನ್ನು ತೀರಿಸಿಕೊಳ್ಳುವುದು) – ಎರಡೂ ದೊರಕುತ್ತವೆ. ಆದ್ದರಿಂದ ಅಂತಹ ಧರ್ಮವನ್ನು ಏಕೆ ನೀವು ಪರಿಪಾಲನೆ ಮಾಡುವುದಿಲ್ಲ?"

ಬನ್ನಿ, ಧರ್ಮ ಮತ್ತು ಆಧ್ಯಾತ್ಮಿಕತೆಗಳನ್ನು ಆಶ್ರಯಿಸಿಯೇ ಎಲ್ಲ ಬಗೆಯ ಸುಖಗಳನ್ನೂ ಪಡೆದುಕೊಳ್ಳೋಣ. ಆ ಮೂಲಕ ಕುಟುಂಬದಲ್ಲಿ ಸಾಮರಸ್ಯವನ್ನು ಹೊಂದೋಣ. •

ಭಗವಂತನ ಸಾಕ್ಷಾತ್ಕಾರವನ್ನು ಪಡೆಯಲಿಚ್ಛಿಸುವವರು ಸಾಧನೆ ಮಾಡಲು ಸಿದ್ಧರಿರಬೇಕು. ಒಬ್ಬ ಆದರ್ಶ ವ್ಯಕ್ತಿಯನ್ನು ಆರಿಸಿಕೊಂಡು, ಆತನ ಉಪದೇಶಗಳ ಆಧಾರದ ಮೇಲೆ ತಮ್ಮ ಜೀವನವನ್ನು ಅಳವಡಿಸಿಕೊಳ್ಳಲು ಸಿದ್ಧರಾಗಿರಬೇಕು. ನಮ್ಮ ಶಾಸ್ತ್ರಗಳ ಪ್ರಕಾರ ಭಗವತ್‌ಸಾಕ್ಷಾತ್ಕಾರಕ್ಕೆ ಎರಡು ಮಾರ್ಗಗಳಿವೆ; ಅವುಗಳಲ್ಲಿ ಒಂದನ್ನು ಆರಿಸಿಕೊಳ್ಳಬೇಕು. ಗೃಹಸ್ಥರಾಗಿ ಜೀವನ ನಡೆಸಬೇಕೇ, ಅಥವಾ ಸಂನ್ಯಾಸ ಜೀವನ ಆರಿಸಿಕೊಳ್ಳಬೇಕೇ? ನೀವು ಯಾವುದೇ ಮಾರ್ಗವನ್ನು ಆರಿಸಿಕೊಳ್ಳಿ. ಆದರೆ ನೆನಪಿಡಬೇಕಾದ ವಿಷಯವೆಂದರೆ ಎರಡೂ ಬಗೆಯ ಜೀವನದಲ್ಲಿ ಮನುಷ್ಯನ ಗುರಿ ಭಗವಂತನ ಸಾಕ್ಷಾತ್ಕಾರ ಎಂದು. ಶ್ರೀಶಂಕರಾಚಾರ್ಯರು ಈ ವಿಷಯವನ್ನು ತಮ್ಮ ಭಗವದ್ಗೀತಾ ಭಾಷ್ಯದ ಅವತರಣಿಕೆಯಲ್ಲಿ ಸುಂದರವಾಗಿ ಹೀಗೆ ಮಂಡಿಸುತ್ತಾರೆ: "ಭಗವಂತನು ಈ ಜಗತ್ತನ್ನು ಸೃಷ್ಟಿಸಿ ಇದರ ವ್ಯವಸ್ಥೆಯನ್ನು ಮಾಡಬೇಕೆಂದು ಮರೀಚಿಯೇ ಮೊದಲಾದ ಪ್ರಜಾಪತಿಗಳನ್ನು ಮೊದಲು ಸೃಷ್ಟಿಸಿದನು. ಅವರಿಗೆ ವೇದಗಳಲ್ಲಿ ಹೇಳಿರುವ ಪ್ರವೃತ್ತಿಲಕ್ಷಣವಾದ ಧರ್ಮವನ್ನು ತಿಳಿಸಿದನು. ಅನಂತರ ಸನಕಾದಿಗಳನ್ನು ಸೃಷ್ಟಿಸಿ, ಅವರಿಗೆ ಜ್ಞಾನವೈರಾಗ್ಯರೂಪವಾದ ನಿವೃತ್ತಿಲಕ್ಷಣವಾದ ಧರ್ಮವನ್ನು ಬೋಧಿಸಿದನು. ಇವೆರಡೂ ರೀತಿಯ ಧರ್ಮಗಳು ಜೀವಿಗಳ ಅಭ್ಯುದಯಕ್ಕೂ, ನಿಶ್ರೇಯಸಕ್ಕೂ ಕಾರಣವಾಗುತ್ತವೆ."

ಗೃಹಸ್ಥರು ಪ್ರಾಪಂಚಿಕ ಜೀವನದಲ್ಲಿ ಪಾಲ್ಗೊಂಡು ಸಾಮಾಜಿಕ ಹೊಣೆ ಮತ್ತು ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಸಂನ್ಯಾಸಿಗಳು ಪ್ರಾಪಂಚಿಕ ಜೀವನವನ್ನು ತ್ಯಾಗಮಾಡಿ, ಪರಮಾತ್ಮನ ಸಾಕ್ಷಾತ್ಕಾರಕ್ಕಾಗಿ ಸಾಧನೆಯಲ್ಲಿ ತೊಡಗುತ್ತಾರೆ. ಆದರೆ ಇದರಲ್ಲಿ ನೆನಪಿಡಬೇಕಾದ ವಿಷಯವೆಂದರೆ ಈ ಎರಡೂ ದಾರಿಗಳು ಬೇರೆ ಬೇರೆ ಆಗಿದ್ದರೂ, ಗುರಿ ಮಾತ್ರ ಒಂದೇ, ಅದೇ ಭಗವತ್ಸಾಕ್ಷಾತ್ಕಾರ. ಈ ಎರಡೂ ಜೀವನವಿಧಾನಗಳ ವ್ಯತ್ಯಾಸವನ್ನು ಶ್ರೀರಾಮಕೃಷ್ಣರು ಸುಂದರವಾಗಿ ಹೀಗೆ ವಿವರಿಸುತ್ತಾರೆ: "ಪ್ರಾಪಂಚಿಕ ಜೀವನದಲ್ಲಿದ್ದುಕೊಂಡು ಜೀವನ ನಡೆಸುವುದು ಕೋಟೆಯಲ್ಲಿದ್ದುಕೊಂಡು ಯುದ್ಧ ಮಾಡುವಂತೆ, ಸಂನ್ಯಾಸಿಗಳದು ಕೋಟೆಯ ಹೊರಗಡೆ ಇದ್ದು ಯುದ್ಧ ಮಾಡುವಂತೆ." ಇದರರ್ಥ ಕೋಟೆಯೊಳಗಡೆ ಇರುವವರಿಗೆ ರಕ್ಷಣೆ ಹೆಚ್ಚು, ಅಪಾಯ ಕಡಿಮೆ.

ಆದರ್ಶ ಕುಟುಂಬಜೀವನ ನಡೆಸಿಕೊಂಡು ಭಗವಂತನ ಸಾಕ್ಷಾತ್ಕಾರ ಪಡೆದುಕೊಳ್ಳುವುದು ಹೇಗೆ? ಶ್ರೀರಾಮಕೃಷ್ಣರು ಇದಕ್ಕೆ ಹಲವಾರು ಉಪದೇಶಗಳನ್ನು ಕೊಟ್ಟಿದ್ದಾರೆ: "ಗಂಡಹೆಂಡತಿಯರು ಒಂದೆರಡು ಮಕ್ಕಳಾದ ಮೇಲೆ, ಅಣ್ಣತಂಗಿಯರಂತೆ ಜೀವನ ನಡೆಸಬೇಕು ಮತ್ತು ಮನಸ್ಸನ್ನು ಭಗವಂತನೆಡೆಗೆ ತಿರುಗಿಸಬೇಕು." ಒಬ್ಬ ಭಕ್ತ ಕೇಳಿದ, "ಗೃಹಸ್ಥಾಶ್ರಮಿಗಳಿಗೆ ಭಗವಂತನ ಸಾಕ್ಷಾತ್ಕಾರ ದೊರೆಯುತ್ತದೆಯೇ?" ಶ್ರೀರಾಮಕೃಷ್ಣರು ನಗುತ್ತ ಉತ್ತರಿಸಿದರು: "ಏಕೆ ದೊರೆಯುವುದಿಲ್ಲ? ಕೆಸರುಮೀನಿನ ಹಾಗಿರಿ. ಅದು ಕೆಸರಿನಲ್ಲೇನೋ ಇರುತ್ತದೆ. ಆದರೆ ಅದು ತನ್ನ ಶರೀರಕ್ಕೆ ಕೆಸರನ್ನು ಅಂಟಿಸಿಕೊಳ್ಳುವುದಿಲ್ಲ."

ಆದರ್ಶ ಕುಟುಂಬಜೀವನ ನಡೆಸುವ ಮೊದಲು ಗಂಡಹೆಂಡತಿಯರಿಬ್ಬರಿಗೂ ಭಗವಂತನಲ್ಲಿ ನಂಬಿಕೆ ಇರಬೇಕು. ಒಳ್ಳೆಯ ಜೀವನ ನಡೆಸಬೇಕೆಂಬ ಭಾವನೆಯಿರಬೇಕು. ಅದನ್ನು ಶ್ರೀರಾಮಕೃಷ್ಣರು ಹೀಗೆ ತಿಳಿಸುತ್ತಿದ್ದರು:

"ಜೀವನದ ಗುರಿಯನ್ನು ಸದಾ ನೆನಪಿನಲ್ಲಿಟ್ಟುಕೊಂಡು, ಆ ಭಗವಂತನನ್ನು ಮನಸ್ಸಿನಲ್ಲಿ ನಿಲ್ಲಿಸಿಕೊಂಡು, ನಾವು ಪ್ರಾಪಂಚಿಕ ಜೀವನ ನಡೆಸಿದರೆ, ನಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಾ, ಅವುಗಳ ಮೂಲಕವೇ ದೇವರೆಡೆಗೆ ಹೋಗುತ್ತೇವೆ... ಇಂದ್ರಿಯಗಳ ಕಡೆ ಕೇಂದ್ರೀಕೃತವಾಗಿರುವ ನಮ್ಮ ಮನಸ್ಸು ಆ ಕಡೆಯಲ್ಲಿ ಪ್ರವಹಿಸುತ್ತಿರುತ್ತದೆ. ಇದನ್ನು ಪರಮಾತ್ಮನ ಕಡೆಗೆ ಬದಲಿಸುವಂತೆ ಮಾಡಬೇಕು. ಇದಕ್ಕಾಗಿ ನಾವು ನಮ್ಮ ಕರ್ತವ್ಯವನ್ನೇನೂ ಬದಲಾಯಿಸಬೇಕಾಗಿಲ್ಲ. ನಾವು ಯಾವ ಕರ್ತವ್ಯವನ್ನು ನಿರ್ವಹಿಸುತ್ತಿದ್ದರೂ, ಮನಸ್ಸು ಮಾತ್ರ ಪರಮಾತ್ಮನ ಕಡೆಗೇ ಹರಿಯುತ್ತಿರಬೇಕು. ನಾವು ಅಡುಗೆ ಮಾಡುತ್ತಿರಬಹುದು ಅಥವಾ ಕಛೇರಿಯಲ್ಲಿ ದುಡಿಯುತ್ತಿರಬಹುದು. ಆದರೆ ಮನಸ್ಸು ಮಾತ್ರ ದೇವರಲ್ಲಿರಬೇಕು. ಈ ರೀತಿ ಮಾಡುತ್ತಿದ್ದರೆ, ಮನಸ್ಸು ಇಂದ್ರಿಯಾಸಕ್ತಿಯನ್ನು ಬಿಟ್ಟು ಮುಕ್ತವಾಗುತ್ತದೆ."

ಶ್ರೀರಾಮಕೃಷ್ಣರು ಗೃಹಸ್ಥರಿಗೆ ಆದರ್ಶ ಜೀವನವನ್ನು ನಡೆಸುವಂತೆ ಪ್ರೇರೇಪಣೆ ನೀಡುತ್ತಿದ್ದರು. ಅದರ ವಿಧಿವಿಧಾನಗಳನ್ನು ಅವರು ಸರಳವಾಗಿ ಉಪದೇಶಿಸಿದ್ದಾರೆ. ಅವುಗಳನ್ನು ನಮಗೆ ಗಂಭೀರವಾಗಿ ಪರಿಚಯಿಸಿರುವ ಸ್ವಾಮೀಜಿಯವರು ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮದ ಮುಖ್ಯಸ್ಥರು. ಹಲವಾರು ಗ್ರಂಥಗಳನ್ನು ರಚಿಸಿರುವ ಇವರು ಉತ್ತಮ ವಾಗ್ಮಿಗಳು ಕೂಡ.